**ಅಸಲು ದಾವಾ ನಂಃ95/2011**
**ಡಿ.ಡಬ್ಲ್ಯೂಃ 5, ಉಮಕಾಂತ**

ದಿನಾಂಕ :**06-02-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ಮತಿ. ವಿ.ಆರ.ಕೆ. ವಕೀಲರಿಂದ :

ನಾನು ಕಲಬುರಗಿಯಲ್ಲಿ 1990 ರಿಂದ ವಾಸ ಇರುತ್ತೇನೆ. ಚಿತ್ತಾಪೂರ ತಾಲೂಕಿನಲ್ಲಿ ದಾವೆಯಲ್ಲಿರುವ ಸ್ವತ್ತು ಹೊರತು ಪಡಿಸಿ ನನಗೆ ಬೇರೆ ಯಾವುದೇ ಜಮೀನು ಇಲ್ಲಾ. ನಾನು ರತ್ನಾಬಾಯಿ ಇವರ ಕಡೆಯಿಂದ ಜಮೀನು ಖರಿದಿ ಮಾಡಿದ್ದು ಸದರಿ ರತ್ನಾಬಾಯಿ ಇವರುನನಗೆ ಖರಿದಿಗಿಂತ 3-4 ವರ್ಷ ಮೊದಲು ಪರಿಚಯ ಇದ್ದರು. ರಾಣೋಜಿ ಇವರ ಕುಟುಂಬದ ಸಂಪೂರ್ಣ ಇತಿಹಾಸ ನನಗೆ ಗೊತ್ತಿಲ್ಲಾ. ಲಲಿತಾಬಾಯಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ 3 ಜನ ಹೆಣ್ಣು ಮಕ್ಕಳು ಮತ್ತು 2 ಜನ ಗಂಡು ಮಕ್ಕಳು ಎಂದು ಹೇಳುತ್ತಾರೆ. ಮೂಲ ಪುರಷ ರಾಣೋಜಿ ಮತ್ತು ಅವರ ಕುಟುಂಬದ ನಡುವೆ ವ್ಯಾಜ್ಯ ಇದ್ದ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದು ಕೇಳಲಾಗಿ ಸಾಕ್ಷಿ ಅವರು ಜಂಟಿ ಕುಟುಂಬ ಎಂದು ಗೊತ್ತು ಎಂದು ಹೇಳುತ್ತಾರೆ. ಅವರು ಕುಟಂಬದವರ ನಡುವೆ ತಕರಾರು ಇದೆ ಎಂದು ಊರಿನವರು ಹೇಳಿದ ವಿಚಾರ ಗೊತ್ತು ಎಂದು ಹೇಳುತ್ತಾರೆ. ನಾನು ಈ ಸ್ವತ್ತು ಖರಿದಿಸುವ ಮೊದಲು ರತ್ನಾಬಾಯಿ ಆಗಲೀ ಊರಿನವರಾಗಲೀ ಈ ವಾಜ್ಯದ ಬಗ್ಗೆ ಹೇಳಿದ್ದರಾ ಎಂದು ಕೇಳಲಾಗಿ ನಾನು ಕೇಳಿದ್ದೆ ರತ್ನಾಬಾಯಿ ನಾನು ಖರಿದಿ ಮಾಡುವ ಹೊಲದ ಮೇಲೆ ಯಾವುದೇ ವಾಜ್ಯ ಇಲ್ಲಾ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ನಾನು ಈ ಸ್ವತ್ತು ಖರಿದಿಸುವ ಮೊದಲು ಯಾರಿಗೂ ಏನು ಕೇಳಿಲ್ಲಾ ಕೇವಲ ರತ್ನಾಬಾಯಿ ಹಾಗೂ ಅವರ ಮಕ್ಕಳ ಜೊತೆ ವ್ಯವಹಾರ ಮಾಡಿದ್ದೆ ಎಂದರೆ ಸಾಕ್ಷಿ ಇಲ್ಲಾ ವಿಚಾರಣೆ ಮಾಡಿ ಖರಿದಿ ಮಾಡಿದ್ದೇನೆ ಎಂದು ಹೇಳುತ್ತಾರೆ.

ಸದರಿ ಮೂಲ ಪುರಷ ರಾಣೊಜಿ ಇವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲಾ. ನಾನು ಆ ಸ್ವತ್ತು ಖರಿದಿಸುವ ಮೊದಲು ಆ ವರ್ಷದ ಪಹಣಿ ನೋಡಿದ್ದೇನೆ. ಆಗ ಊರಿನ ಜನರನ್ನು ಹಾಗೂ ಜಮೀನಿನ ಪಕ್ಕದ ಸಿದ್ದೋಜಿ ಮತ್ತು ಇತರರನ್ನು ವಿಚಾರಿಸಿರುತ್ತೇನೆ. ನಾನು ಆ ಸಮಯದಲ್ಲಿ ರತ್ನಾಬಾಯಿಗೆ ಆ ಜಮೀನು ಯಾವ ರೀತಿ ಬಂದಿತ್ತು ಎಂದು ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲಾ ಎನ್ನವುದು ಸರಿ. ನಾನು ನನ್ನ ಪ್ರಮಾಣ ಪತ್ರ ಹಾಗೂ ಪ್ರತಿವಾದ ಪತ್ರದ ಅಂಶಗಳಿಗೆ ನನಗೆ ಗೊತ್ತಿದ ವಿಚಾರಗಳನ್ನು ಹೇಳಿದ್ದು ಉಳಿದ ಅಂಶಗಳನ್ನು ವಕೀಲರು ಬರೆಸಿರುತ್ತಾರೆ.

**ಅಸಲು ದಾವಾ ನಂ:95/2011**
**ಡಿ.ಡಬ್ಲ್ಯೂ: 5, ಉಮಕಾಂತ**

ಈ ಸ್ವತ್ತು ಖರಿದಿಸುವ ಮೊದಲು ನಾನು ದಿನಪತ್ರಿಕೆಯಲ್ಲಿ ಜಾಹಿರಾತು ಹೊರಡಿಸಿಲ್ಲಾ ಅದೇ ರೀತಿ ಹೀರಾಬಾಯಿ, ಸುಮಿತ್ರಾಬಾಯಿ, ಶಿವಾಜಿಯವರನ್ನು ವಿಚಾರಣೆ ಮಾಡಿಲ್ಲಾ. ರಾಣೋಜಿ ತಂದೆ ಮಲ್ಲಿನಾಥ ಪಾಟೀಲ ಇವರು ಈ ದಾವೆಯ ಪ್ರತಿವಾದಿ ನಂ-5(ಡಿ) ನನಗೆ ಸ್ವತ್ತು ಖರಿದಿಸುವ 5-6 ವರ್ಷದ ಮೊದಲು ಪರಿಚಯ ಇದ್ದರು. ನಾನು ಅವರ ಮನೆಗೆ 2 ಸಾರಿ ಹೋಗಿರುತ್ತೇನೆ ಅವರ ಮನೆಯ ವಿಚಾರ ನನಗೆ ಗೊತ್ತಿಲ್ಲಾ. ಲಿಲಿತಾಬಾಯಿ, ರಾಣೋಜಿ, ರತ್ನಾಬಾಯಿ ಇವರಿಗೆ ಸಹಾಯ ಮಾಡಲು ಖೊಟ್ಟಿ ಖರಿದಿ ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ ಸದರಿ ಖರಿದಿ ಮಾಡಿದ ಜಮೀನಿಗೆ ನಾನು ಕಬ್ಜೆಯಲ್ಲಿ ಇಲ್ಲಾ ಎನ್ನುವುದು ಸರಿಯಲ್ಲ. ಈ ದಾವೆಯು ಚಾಲ್ತಿಯಲ್ಲಿ ಇದೆ ಎಂದು ಗೊತ್ತಿದ್ದರು ಸಹ ಲಿಲಿತಾಬಾಯಿ, ರಾಣೋಜಿ, ಇವರಿಗೆ ಸಹಾಯ ಮಾಡಲು ಖೊಟ್ಟಿ ಖರಿದಿ ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲಾ ಎಂದು ಸೂಚಿಸುವುದ ಸರಿಯಲ್ಲ.

## ಮರು ವಿಚಾರಣೆ: ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.